ಅದರ ಪ್ರತಿ ನಮ್ಮ ಸರ್ಕಾರಕ್ಕೆ ಬಂದು ತಲುಪಿದೆಯೆ ? ಕೃಷಿಗೆ ಸಂಬಂಧಪಟ್ಟ ಹಾಗೆ ಜನರಲ್ ಅಗ್ರಿಮೆಂಟ್ ಫಾರ್ ಟ್ಯಾರಿಫ್ ಅಂಡ್ ಟ್ರೇಡ್ ಎಂದು ಏನಿದೆ ಅದಕ್ಕೆ ಸಂಬಂಧಪಟ್ಟ ಹಾಗೆ ಡಂಕಲ್ ವರದಿ ಏನಿದೆ, ಡಂಕಲ್ ಪ್ರಸ್ತಾವನೆ ಅದರ ಪ್ರತಿಯೇನಾದರೂ ನಿಮ್ಮ ಸರ್ಕಾರದಲ್ಲಿದೆಯೆ ? ನಿಮ್ಮ ಇಲಾಖೆಯಲ್ಲಿ ಇದೆಯೆ ? ಏಕೆ ಹೇಳುತ್ತಿದ್ದೇನೆಂದರೆ, ತಾವು ಇದರಲ್ಲಿ ಕಣ್ಣುಮುಚ್ಚಿಕೊಂಡು ಕುಳಿತರೆ ರೈಸೋಬಿಯಂ ಸಿಗುವುದಿಲ್ಲ, ಬ್ಲೂ ಗ್ರೀನ್ ಆಲ್ಗೈನೂ ಸಿಗುವುದಿಲ್ಲ. ಇದನ್ನು ಪೇಟೆಂಟ್ ಮಾಡಿ ಇಟ್ಟುಕೊಂಡು ಬ್ಲೂಗ್ರೀನ್ ಆಲ್ಗೈನ್ ಇಲ್ಲದೇ ಇರುವಂತಹ ಕೃಷಿ ಇಲಾಖೆಯನ್ನಾಗಿ ಪರಿವರ್ತನೆ ಮಾಡುತ್ತೀರಿ ನೀವು. ಸಮಿತಿ ರಿಪೋರ್ಟ್‌ಗೆ ಕಾಯುತ್ತಿದ್ದೇವೆಂದು ಹೇಳಿದ್ದೀರಿ. ನಾವು ಸುನ್ಮುನಾಗುತ್ತೇವೆಂದು ಸ್ವಾಮಿನಾಥನ್‌ರವರ ಹೆಸರು ಹೇಳಿದರು. ಯಾವ ರೀತಿ ಸಮಿತಿ ರಚನೆ ಮಾಡಿ ಯಾವ ರೀತಿ ಸಮಿತಿ ಕೆಲಸ ಮಾಡಿದೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ.

ಅಧ್ಯಕ್ಷರು:– ಅದಕ್ಕೆ ಅವಕಾಶ ಕೊಡುವುದಿಲ್ಲ. ಮುಂದಿನ ಪ್ರಶ್ನೆ ಅಂಜನಮೂರ್ತಿಯವರು. ಮಾನ್ಯ ಸದಸ್ಯರು ಮಾತನಾಡಬೇಕಾದರೆ ಬೇರೆ ಫಾರಂನಲ್ಲಿ ತೆಗೆದುಕೊಂಡು ಬನ್ನಿ. ಮತ್ತೆ ಪ್ರಶ್ನೆ ಕೇಳಿ. ಪ್ರಶ್ನೋತ್ತರ ವೇಳೆಯಲ್ಲಿ, ಕಾಲದ ಮಿತಿ ಇದೆ. ಕಾಲದ ಮಿತಿಯಲ್ಲಿ, ಜಾಸ್ತಿ ಪ್ರಶ್ನೆಗಳನ್ನು ಕೇಳಿದರೆ ನನಗೆ ಕಷ್ಟವಾಗುತ್ತದೆ. ತಾವು ಬೇರೆ ಫಾರಂನಲ್ಲಿ ತೆಗೆದುಕೊಂಡು ಬನ್ನಿ.

SRI M. RAJASHEKHARA MURTHY:– The question No. 761 is transferred to Housing and Urban Development Department.

ರಾಜ್ಯದಲ್ಲಿರುವ ಸ್ಟಾಂಪ್ ವೆಂಡರ್‌ಗಳಿಗೆ ಹತ್ತು ಸಾವಿರ ಮೇಲ್ಪಟ್ಟ ಸ್ಟಾಂಪ್‌ಗಳನ್ನು ಮಾರಾಟ ಮಾಡಲು ಪೂರೈಸದೇ ಇರುವ ಬಗ್ಗೆ.

131 (791): ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರವು ಸ್ಟಾಂಪ್ ವೆಂಡರ್‌ಗಳಿಗೆ ಎಷ್ಟು ಸಾವಿರ ರೂಪಾಯಿಗಳವರೆಗೆ ಸ್ಟಾಂಪ್ ಪೇಪರ್ ಮಾರಾಟ ಮಾಡಲು ಅಧಿಕಾರ ನೀಡಿರುವುದು ?

ಆ) ಸಾರ್ವಜನಿಕರು ಹತ್ತು ಸಾವಿರ ಮೇಲ್ಪಟ್ಟು ಸ್ಟಾಂಪ್ ಪೇಪರ್ ಖರೀದಿಸುವಾಗ ಅವು ಸಿಗದೆ ತೊಂದರೆಯಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಇದರ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಈ) ಸ್ಟಾಂಪ್ ವೆಂಡರ್‌ದಾರರಿಗೆ ಹತ್ತು ಸಾವಿರಕ್ಕಿಂತ ಮೇಲ್ಪಟ್ಟ ಸ್ಟಾಂಪ್ ಪೇಪರ್‌ಗಳನ್ನು ಮಾರಾಟ ಮಾಡಲು ಸರ್ಕಾರ ಏನಾದರೂ ಕ್ರಮ ಕೈಗೊಳ್ಳುವುದೇ ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ಒಂದು ವ್ಯವಹಾರದಲ್ಲಿ 'ಎ' ದರ್ಜಿ ಸ್ಟಾಂಪ್ ವೆಂಡರ್‌ಗಳಿಗೆ ರೂ. 10,000–00 ದವರೆಗೂ ಮತ್ತು 'ಬಿ' ದರ್ಜಿ ಸ್ಟಾಂಪ್ ವೆಂಡರ್‌ಗಳಿಗೆ ರೂ. 5,000–00 ದವರೆಗೂ ಸ್ಟಾಂಪ್ ಪೇಪರ್ ಮಾರಾಟ ಮಾಡಲು ಅನುಮತಿ ನೀಡಿದೆ.

ಆ) ಇಂತಹ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಇಲ್ಲ

ಶ್ರೀ ಪಿ.ಸಿ. ಸಿದ್ದನಗೌಡರ್:– ಮಾನ್ಯ ಅಧ್ಯಕ್ಷರೆ, ಅನ್‌ಸ್ಟ್ಯಾಂಪ್ಡ್ ಕೊಶ್ಚನ್‌ಗೆ ಕೊಟ್ಟಂತಹ ಉತ್ತರ ಬೇರೆ ಇದೆ. ಸ್ಟಾಂಪ್ಡ್ ಕೊಶ್ಚನ್‌ಗೆ ಕೊಟ್ಟಂತಹ ಉತ್ತರ ಬೇರೆ ಇದೆ. ರೈತರು ಸಬ್‌ರಿಜಿಸ್ಟ್ರಾರ್ ಆಫೀಸಿಗೆ ಹೋದಾಗ 10 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ಸ್ಟಾಂಪ್ ಪೇಪರ್ ಖರೀದಿ ಮಾಡಬೇಕಾದರೆ ಅಲ್ಲಿ ಅವರಿಗೆ ಸಿಗುವುದಿಲ್ಲ. ಇಲ್ಲಿ ಉತ್ತರದಲ್ಲಿ ಹೇಳುತ್ತಾರೆ. 10 ಸಾವಿರ ರೂಪಾಯಿಗಳಿಗಿಂತ ಮೇಲ್ಪಟ್ಟು ಸ್ಟಾಂಪ್ ಪೇಪರ್‌ಗಳನ್ನು ಎ. ಕ್ಲಾಸ್ ಸ್ಟಾಂಪ್ ವೆಂಡರ್‌ಗಳು ಕೊಡುವುದಕ್ಕೆ ಬರುವುದಿಲ್ಲವೆಂದು ಉತ್ತರದಲ್ಲಿ ಹೇಳುತ್ತಿದ್ದಾರೆ. ಇನ್ನೊಂದು ಕಡೆ ಆದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ಬೆಂಗಳೂರಿನಲ್ಲಿ ಮಾತ್ರ ಇದೆಯೆಂದು ನಾನು ಕೇಳಿದ್ದೇನೆ. 10 ಸಾವಿರ ರೂಪಾಯಿ ಮೇಲೆ ಸ್ಟಾಂಪ್ ಪೇಪರ್ ಖರೀದಿ ಮಾಡಬೇಕಾದರೆ ರೈತರಿಗೆ ಸಿಗುವುದಿಲ್ಲ. ಅದಕ್ಕೆ ತಾವು ರಿಸ್ಟ್ರಿಕ್ಷನ್ ಹಾಕಿದ್ದೇವೆಂದು ಒಂದು ಕಡೆ ಹೇಳುತ್ತೀರಿ ಮತ್ತೊಂದು ಕಡೆ ಇಲ್ಲವೆಂದು ಹೇಳುತ್ತೀರಿ. ಇದರ ಬಗ್ಗೆ ಸರಿಯಾಗಿ ಹೇಳಬೇಕು.

ಶ್ರೀ ಎಂ. ರಾಜಶೇಖರಮೂರ್ತಿ:– ಮಾನ್ಯ ಅಧ್ಯಕ್ಷರೆ, ಸ್ಟಾಂಪ್ ವೆಂಡರ್ಸ್‌ನಲ್ಲಿ ಎರಡು ಭಾಗ ಇದೆ. ಒಂದು ಎ–ಗ್ರೂಪ್, ಮತ್ತೊಂದು ಬಿ–ಗ್ರೂಪೆಂದು. ಎ–ಗ್ರೂಪಿನವರು 10 ಸಾವಿರ ರೂಪಾಯಿವರೆಗೆ ಕೊಡಬಹುದು. ಬಿ–ಗ್ರೂಪಿನವರು 5 ಸಾವಿರ ರೂಪಾಯಿಗಳವರೆಗೆ ಸ್ಟಾಂಪ್ ಪೇಪರ್ ಕೊಡಬಹುದು. ಅದಕ್ಕಿಂತ ಜಾಸ್ತಿ ಪೇಪರ್ ಬೇಕಾದರೆ ವಕೀಲರ ಸಹಕಾರ ಸಂಘವಿದೆ. ಮತ್ತು ಇಲಾಖೆಯಲ್ಲಿ ಒಂದು ಸಹಕಾರ ಸಂಘ ಮಾಡಿಕೊಂಡಿದ್ದಾರೆ. ಅವರು 1 ಲಕ್ಷ ರೂಪಾಯಿಗಳವರೆಗೆ ಕೊಡಬಹುದು. ಅದು ಅಲ್ಲದೆ ಎಲ್ಲಾ ತಾಲ್ಲೂಕು ಟ್ರಜರಿಗಳಲ್ಲಿ ಮತ್ತು ಡೆಪ್ಯೂಟಿ ಡೈರೆಕ್ಟರ್ ಆಫ್ ಟ್ರೆಜರಿ ಅದು ವಿಧಾನಸೌಧದಲ್ಲಿದೆ. ಅವರು ಅನ್‌ಲಿಮಿಟೆಡ್ ವ್ಯಾಲ್ಯೂ ಸ್ಟಾಂಪ್ ಪೇಪರ್‌ಗಳನ್ನು ಕೊಡಬಹುದು. ಆದ್ದರಿಂದ ಯಾವ ತರಹದ ತೊಂದರೆಯಾಗಿಲ್ಲ.

ಶ್ರೀ ಪಿ. ಸಿ. ಸಿದ್ದನಗೌಡರ್:– ರಿಸ್ಟ್ರಿಕ್ಷನ್ ತೆಗೆದರೆ ಏನು ತೊಂದರೆಯಾಗುತ್ತದೆ ? ಏಕೆಂದರೆ ಟ್ರೆಜರಿಯಲ್ಲಿ ಹಣ ತುಂಬಿ ಅವರು ತೆಗೆದುಕೊಳ್ಳುತ್ತಾರೆ. ರಿಸ್ಟ್ರಿಕ್ಷನ್ ಹಾಕುವುದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತದೆ. ಮೊದಲು ತಾವು ಉದ್ಭವಿಸುವುದಿಲ್ಲವೆಂದು ಹೇಳುತ್ತೀರಿ. ಸಾರ್ವಜನಿಕರಿಗೆ ಏನೂ ತೊಂದರೆಯಿಲ್ಲವೆಂದೂ ಸರ್ಕಾರಕ್ಕೆ ತಿಳಿದಿದೆಯೆಂದು ಹೇಳುತ್ತಾರೆ. ಇಲ್ಲಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ. ನನ್ನ ರಿಕ್ವೆಸ್ಟ್ ಏನೆಂದರೆ, ರಿಸ್ಟ್ರಿಕ್ಷನ್ ತೆಗೆಯಿರಿ. ನಾನು ಅನೇಕ ಸಾರಿ ಕೇಳಿದ್ದೇನೆ. ಮೂರನೆಯ ಸಲ ಕೇಳುತ್ತಾ ಇದ್ದೇನೆ. ಇದಕ್ಕೆ ತಾವು ಕಾನೂನು ತಿದ್ದುಪಡಿ ಮಾಡುವುದಾದರೆ ಮಾಡಿ.

ಶ್ರೀ ಎಂ. ರಾಜಶೇಖರ ಮೂರ್ತಿ:– ಮಾನ್ಯ ಸದಸ್ಯರು ರಿಸ್ಟ್ರಿಕ್ಷನ್ ತೆಗೆಯಬೇಕೆಂದು ಹೇಳುತ್ತಿದ್ದಾರೆ. ಈಗ 5 ಸಾವಿರ ಮತ್ತು 10 ಸಾವಿರ ಲಿಮಿಟ್ ಹಾಕಿರುವುದರಿಂದ ಸರ್ಕಾರಕ್ಕೆ 2 ಕೋಟಿ 97 ಲಕ್ಷ ಕಮೀಷನ್ ಕೊಡಬೇಕಾಗುತ್ತದೆ. ರಿಸ್ಟ್ರಿಕ್ಷನ್ ತೆಗೆದರೆ ಕಮೀಷನ್ ದರ ಜಾಸ್ತಿಯಾಗುತ್ತದೆ. ರಿಸ್ಟ್ರಿಕ್ಷನ್ ತೆಗೆಯಬೇಕೆಂದು ಒಂದು ಪ್ರಪೋಸಲ್ ಹಿಂದೆ ಬಂದಿದೆ. ಆದರ ಬಗ್ಗೆ ಸರ್ಕಾರ ಆಖೈರ್ ತೀರ್ಮಾನ ತೆಗೆದುಕೊಂಡಿಲ್ಲ. ರಿಸ್ಟ್ರಿಕ್ಷನ್ ತೆಗೆಯಬೇಕಾದರೆ ಲಿಮಿಟ್ ಜಾಸ್ತಿ ಮಾಡಿ ಕಮೀಷನ್ ಕಡಿಮೆ ಮಾಡಿ ಹೆಚ್ಚಿಗೆ ಸರ್ಕಾರಕ್ಕೆ ಹೊರೆ ಆಗದ ಹಾಗೆ ನೋಡಿಕೊಳ್ಳಬೇಕಾಗಿದೆ. ಅದು ಸರ್ಕಾರದ ಮುಂದಿದೆ.

ಶ್ರೀ ಪಿ. ಸಿ. ಸಿದ್ದನಗೌಡರ್:– ತಾವು ಏನಾದರೂ ಮಾಡಿ ಸ್ಟಾಂಪ್ ಪೇಪರ್ ಕೊಡಿ.

ಶ್ರೀ ಜೆ.ಎಸ್. ಶಿವಸಂಜಪ್ಪ:– ಸ್ಟಾಂಪ್ ಪೇಪರನ್ನು 10 ಸಾವಿರದ ಮೇಲೆ ಕೇಳಿದರೆ ಸ್ಟಾಂಪ್ ವೆಂಡರ್ ಟ್ರಜರಿನಲ್ಲಿ ದುಡ್ಡು ತುಂಬಿ ಇಂಡೆಂಟನ್ನು ಕೊಟ್ಟು ಸ್ಟಾಂಪ್ ಪೇಪರ್‌ಗಳನ್ನು ತೆಗೆದುಕೊಂಡು

ಬಂದು ನಮಗೆ ಕೊಡುತ್ತಾರೆ. ಆದರ ಬದಲಾಗಿ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿಯೇ ಮಾರಾಟ ಮಾಡತಕ್ಕ ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದು ? ಆಂಧ್ರಪ್ರದೇಶದಲ್ಲಿ ಈ ವ್ಯವಸ್ಥೆಯಿದೆ. ಇದರಿಂದ ಸರ್ಕಾರಕ್ಕೆ ಹಣ ಬರುತ್ತದೆ. ನೇರವಾಗಿ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಮಾರಾಟ ಮಾಡತಕ್ಕ ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದು ?

SRI M. RAJASHEKHARA MURTHY:-- That is a new suggestion. It will be examined.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ಮಾನ್ಯ ಅಧ್ಯಕ್ಷರೇ, ಪ್ರಶ್ನೆ 132 (1025) ನನಗೆ ನೇರವಾಗಿ ಸಂಬಂಧಪಟ್ಟಂಥ ಪ್ರಶ್ನೆ ಅಲ್ಲ. ತೋಟಗಾರಿಕೆ ಇಲಾಖೆಯ ಮುಖಾಂತರ ಅವರಿಗೆ ಉತ್ತರ ಕೊಡಬೇಕಾಗುತ್ತದೆ.

ಅಧ್ಯಕ್ಷರು:– ಇದನ್ನು ಹೆಲ್ಡ್ ಓವರ್ ಮಾಡುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ:– ತೋಟಗಾರಿಕೆ ಮಂತ್ರಿಗಳು ಇಲ್ಲಿ ಇದ್ದಾರೆ. ಉತ್ತರ ಬಂದಿದ್ದರೆ ಅವರು ಕೊಡಲಿ. Any Minister can reply Collective responsibility is there.

ಅಧ್ಯಕ್ಷರು:– ಇದು ಟ್ರಾನ್ಸ್‌ಫರ್ ಆಗಿದೆ. ತೋಟಗಾರಿಕೆ ಮಂತ್ರಿಗಳು ಬಂದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಮ್ಕಿ ಹಕ್ಕು ಊರ್ಜಿತ

133 (1040): ಶ್ರೀ ಎ. ರುಕ್ಮಯ್ಯ ಪೂಜಾರಿ (ಏಟ್ಲ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಲೆತಲಾಂತರದಿಂದ ಕುಮ್ಕಿ ಹಕ್ಕು ಇರುವುದು ಸರ್ಕಾರದ ಗಮನದಲ್ಲಿದೆಯೇ ?

ಆ) ಇತ್ತೀಚೆಗೆ ಸರ್ಕಾರ ಕುಮ್ಕಿ ಹಕ್ಕು ರದ್ದು ಮಾಡಿದೆಯೆ ? ಇದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಸರ್ಕಾರ ರೈತರಿಗೆ ಕುಮ್ಕಿ ಹಕ್ಕು ಊರ್ಜಿತಗೊಳಿಸಲು ಕ್ರಮ ತೆಗೆದುಕೊಳ್ಳುವುದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು

ಆ) ಇಲ್ಲ
ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಶ್ರೀ ಎ. ರುಕ್ಮಯ್ಯ ಪೂಜಾರಿ:– ಮಾನ್ಯ ಅಧ್ಯಕ್ಷರೇ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಮ್ಕಿ ಹಕ್ಕು ಪದ್ಧತಿ ಹಿಂದಿನಿಂದ ನಡೆದುಕೊಂಡು ಬಂದಿದೆ. ರೈತರು ಕೃಷಿಗಾಗಿ ಸೊಪ್ಪು ಸೆದೆಗಾಗಿ ಈ ಜಮೀನನ್ನು ಉಪಯೋಗಿಸಿಕೊಳ್ಳುತ್ತಾರೆ. ಇತ್ತೀಚೆಗೆ ರೆವಿನ್ಯೂ ಅಧಿಕಾರಿಗಳು, ಗ್ರಾಮಲೆಕ್ಕಿಗರು, ತಹಸೀಲ್ದಾರರು, ಸಂಬಂಧಪಟ್ಟ ಅಧಿಕಾರಿಗಳು ಕುಮ್ಕಿ ಹಕ್ಕು ರದ್ದಾಗಿದೆ ಎಂದು ಹೇಳುತ್ತಿದ್ದಾರೆ ಮತ್ತು ತೊಂದರೆಯನ್ನು ಕೊಡುತ್ತಿದ್ದಾರೆ. ಆದರೆ ಇಲ್ಲಿ ಕುಮ್ಕಿ ಹಕ್ಕು ರದ್ದಾಗಿಲ್ಲವೆಂದು ನನಗೆ ಉತ್ತರ